ಕೊಟ್ಟಿದ್ದೇವೆಂದು ಹೇಳಿದ್ದೀರಿ, ಬಡ್ಡಿಯನ್ನಾದರೂ ಮನ್ನಾ ಮಾಡಿ. ನಿಮಗೆ ಸಾರಾಯಿ ಮಾರಾಟ ಮಾಡುತ್ತಿರುವವರ ಪರಿಸ್ಥಿತಿ ಗೊತ್ತಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಬಗ್ಗೆ ಎಷ್ಟು ಬದ್ಧತೆಯಿದೆಯೆಂದು ಹೇಳಿದರು. ಪಾಪ ಆ ಬಡ ಮಂದಿ ಸಾರಾಯಿ ಮಾರಾಟವನ್ನೆಲ್ಲಾ ಬಂದ್ ಮಾಡಿಕೊಂಡಿದ್ದಾರೆ. ಅವರಿಗೂ ಸ್ವಲ್ಪ ಕರುಣೆ ತೋರಿಸಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ :– ನಾವೆಲ್ಲಾ ಸೇರಿ ಪಾಪ ಅವರ ಬಾಯಿಗೆ ಮಣ್ಣನ್ನು ಹಾಕಿದ್ದೇವೆ. ನೀವು 20,000, 25,000 ರೂಪಾಯಿಗಳ ಸಾಲವನ್ನೇನೋ ಕೊಟ್ಟಿದ್ದೀರಿ. ನಿಮಗೆ ಸಾಲ ಮನ್ನಾ ಮಾಡುವುದಕ್ಕೇನು ತೊಂದರೆಯಿದೆ? ದಯಾಮಾಡಿ ಏನಾದರೊಂದು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ಸಾಲವನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಹೇಳಿರುವ ಸಲಹೆಯನ್ನು ಪರಿಗಣಿಸುವುದಕ್ಕೆ ಸರ್ಕಾರ ಸಿದ್ಧವಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :–ಇದು ಸಣ್ಣ ಮೊತ್ತ. ಕೇವಲ ಒಂಭತ್ತು ಕೋಟಿ ರೂಪಾಯಿಗಳಷ್ಟಿದೆ.

7.ವಿಷಯ: ಏಲಕ್ಕಿ ಬೆಳೆಗೆ ತಗುಲಿರುವ ಕೊಕ್ಕೆ ಕಂದು ರೋಗದಿಂದ ನಷ್ಟಕ್ಕೊಳಗಾಗಿರುವ ರೈತರ ಸಾಲ ಮನ್ನಾ ಮಾಡುವ ಬಗ್ಗೆ.

ಶ್ರೀ ಎಸ್.ಸುರೇಶ್ ಕುಮಾರ್ :– (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, ಏಲಕ್ಕಿ ಬೆಳೆಗೆ ಕೊಕ್ಕೆ ಕಂದು ರೋಗವು ಹಾಸನ. ಕೊಡಗು, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕಾಣಿಸಿಕೊಂಡಿರುತ್ತದೆ. ಈ ರೋಗದ ಹಾವಳಿಯು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿರುತ್ತದೆ. ಈ ತಾಲ್ಲೂಕಿನಲ್ಲಿ ಬೆಳೆದಿರುವ ಸುಮಾರು 7390 ಹೆಕ್ಟೇರ್ ಪ್ರದೇಶದಲ್ಲಿನ ಏಲಕ್ಕಿ ಬೆಳೆಯಲ್ಲಿ ಶೇಕಡಾ 30 ರಿಂದ 40ರಷ್ಟು ವಿಸ್ತೀರ್ಣದಲ್ಲಿನ ಬೆಳೆಗೆ ಕೊಕ್ಕೆ ಕಂದು ರೋಗವು ತಗಲಿರುವುದು ಕಂಡು ಬಂದಿರುತ್ತದೆ ಈ

ರೋಗವನ್ನು ನಿಯಂತ್ರಿಸಲು ತೋಟಗಾರಿಕೆ ಇಲಾಖೆ ತಾಂತ್ರಿಕ ಮಾರ್ಗದರ್ಶನ ನೀಡಿರುತ್ತದೆ. ಅಲ್ಲದೇ, ಈ ರೋಗ ಪ್ರಸಾರಕ್ಕೆ ಕಾರಣವಾದ ಸಸ್ಯ ಹೇನುಗಳನ್ನು ನಿಯಂತ್ರಿಸಲು ತೋಟಗಾರಿಕೆ ಇಲಾಖೆಯು ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ರೈತರಿಗೆ ಶೇಕಡಾ 50ರಂತೆ ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ.2,000.00ರಷ್ಟು ಸಹಾಯಧನವನ್ನು ನೀಡುತ್ತಿದೆ. ಅಲ್ಲದೇ. ಸಾಂಬಾರು ಮಂಡಳಿ ಸಕಲೇಶಪುರ ವತಿಯಿಂದ ಪುನಶ್ಚೇತನ ಕಾರ್ಯಕ್ರಮಕ್ಕೆ ಪ್ರತಿ ಹೆಕ್ಟೇರಿಗೆ ರೂ.27,000.00 ಸಹಾಯಧನ ನೀಡಲಾಗುತ್ತಿದೆ.

ಏಲಕ್ಕಿ ಬೆಳೆಗಾರರು ಕೃಷಿ ಸಹಕಾರ ಸಂಘಗಳಿಂದ/ಸಹಕಾರ ಬ್ಯಾಂಕು-ಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ಸರ್ಕಾರದ ಸಾಲ ಮನ್ನಾ ಯೋಜನೆ-2012ರ ರೀತ್ಯಾ ಅರ್ಹವಿರುವ ರೈತರ ಅಲ್ಪಾವಧಿ ಬೆಳೆ ಸಾಲ ರೂ.25.000.00 ಅಸಲು ಮತ್ತು ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದೆ.

ಏಲಕ್ಕಿ ಬೆಳೆಗಾರರುಅಲ್ಪಾವಧಿ ಬೆಳೆ ಸಾಲವನ್ನು ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳ ಸಹಕಾರ ಬ್ಯಾಂಕುಗಳಿಂದ ಪಡೆದಿರುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮುಖಾಂತರ ದಿನಾಂಕ:25.07.2012ಕ್ಕೆ 290 ಏಲಕ್ಕಿ ಬೆಳೆಗಾರರು ರೂ.116.70ಲಕ್ಷ ಅಲ್ಪಾವಧಿ ಬೆಳೆ ಸಾಲ ಪಡೆದಿದ್ದು ಈ ಪೈಕಿ 284 ಏಲಕ್ಕಿ ಬೆಳೆಗಾರರ ರೂ.73.28ಲಕ್ಷ ಮನ್ನಾ ಮಾಡಲಾಗಿದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) :- ಸಕಲೇಶಪುರ ತಾಲ್ಲೂಕು ಸೇರಿದಂತೆ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಏಲಕ್ಕಿ ಬೆಳೆಗೆ ತಗಲಿರುವ ಕೊಕ್ಕೆ ಕಂದು ರೋಗದಿಂದ ಸುಮಾರು 80% ಬೆಳೆ ನಾಶವಾಗಿದೆ. ಹಲವಾರು ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಮಾಡಿ ರೈತರು ತುಂಬಾ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಜೊತೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮಾಡಿದಂತಹ ತಜ್ಞರ ಸಮಿತಿ ಕೂಡ ಇವರು ತುಂಬಾ ಸಂಕಷ್ಟದಲ್ಲಿದ್ದಾರೆ ಇವರ ಸಾಲವನ್ನು ಮನ್ನಾ ಮಾಡಬೇಕೆಂಬ ನಿರ್ದಿಷ್ಟವಾದ ಶಿಫಾರಸ್ಸನ್ನು ಮಾಡಿದ್ದಾರೆ. ಈ ಹಿಂದೆ ಹಲವಾರು ಬಾರಿ ಸದನದಲ್ಲಿ ಕೂಡ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಇರುವ ಎಂಟು ಕೋಟಿ ರೂಪಾಯಿಗಳಿಂದ ಹತ್ತು ಕೋಟಿ ರೂಪಾಯಿಗಳ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂದು ಹಾಗೂ ಈ ವಿಷಯವನ್ನು ಬಜೆಟ್‌ನಲ್ಲಿ ಪ್ರಸ್ತಾಪ

ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ:5–2–2013 ರಂದು ಪತ್ರವನ್ನು ಕೊಟ್ಟು ಒತ್ತಾಯ ಮಾಡಿದ್ದೇನೆ. ಅವರು ಬಜೆಟ್‌ನಲ್ಲಿ ಪ್ರಸ್ತಾಪವನ್ನು ಇಡಬಹುದೆಂಬ ಆದೇಶವನ್ನು ಮಾಡಿದ್ದರು. ಅದು ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಹೋಗಿದ್ದರೂ ಕೂಡ ಅದು ಸರಿಯಾದ ಸಮಯದಲ್ಲಿ ಬರದೇ ಇದ್ದುದರಿಂದ ಬಹುಶಃ ಅದು ಸೇರಿಲ್ಲ. ದಯಮಾಡಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಬಜೆಟ್ ಮಂಡನೆಯ ಚರ್ಚೆಯ ವಿಷಯದಲ್ಲಿ ಉತ್ತರ ಕೊಡುವಾಗ ಸಂಕಷ್ಟದಲ್ಲಿರುವ ಏಲಕ್ಕಿ ಬೆಳೆಗಾರರ ಸಾಲವನ್ನು ದಯವಿಟ್ಟು ಮನ್ನಾ ಮಾಡಬೇಕೆಂದು ನಾನು ಈ ಮೂಲಕ ಒತ್ತಾಯ ಮಾಡುತ್ತೇನೆ. ಇದನ್ನು ಬಜೆಟ್‌ನಲ್ಲಿ ಘೋಷಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್.ಸುರೇಶ್ ಕುಮಾರ್:– (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮುಖಾಂತರ 290 ಏಲಕ್ಕಿ ಬೆಳೆಗಾರರು, 1 ಕೋಟಿ 16 ಲಕ್ಷ ಅಲ್ಪಾವಧಿ ಬೆಳೆ ಸಾಲ ಪಡೆದಿದ್ದರೋ, ಈ ಪೈಕಿ 284 ಏಲಕ್ಕಿ ಬೆಳೆಗಾರರ 73 ಲಕ್ಷ ರೂ.ಗಳನ್ನು ಮನ್ನಾ ಮಾಡಲಾಗಿದೆ. ಇನ್ನುಳಿದ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬಜೆಟ್‌ಗೆ ಉತ್ತರ ಕೊಡುವ ಸಮಯದಲ್ಲಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

8.ವಿಷಯ : ಇತ್ತೀಚೆಗೆ ರಾಜ್ಯದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮಹಿಳೆಯರು ಅಭದ್ರತೆಯಿಂದ ಭಯಭೀತರಾಗಿರುವುದರಿಂದ ಈ ಕುರಿತು ತುರ್ತು ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ :– ಮಾನ್ಯ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರ ಅವರ ಪರವಾಗಿ ನಾನು ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು :– ಆಯಿತು.